ರೈತರ ಜಮೀನು ಬೆಲೆ ನಿಗಧಿಪಡಿಸಲು ಸರ್ಕಾರ ರಚಿಸಿರುವ ತಾಲ್ಲೂಕು ಮಟ್ಟದ ಸಮಿತಿ ರಚನೆ.

643 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರೈತರ ಜಮೀನಿಗೆ ಬೆಲೆ ನಿಗಧಿಪಡಿಸಲು ಸರ್ಕಾರ ತಾಲ್ಲೂಕಿನ ಮಟ್ಟದಲ್ಲಿ ಸಮಿತಿ ರಚಿಸಿರುವ ಸಮಿತಿಯಲ್ಲಿ ಕೇವಲ ಸರ್ಕಾರಿ ಅಧಿಕಾರಿಗಳೇ ಸದಸ್ಯರಾಗಿರುವುದರಿಂದ ಜಮೀನು ಬೆಲೆ ನಿಗಧಿಪಡಿಸುವಾಗ ತಾರತಮ್ಯ ಉಂಟಾಗುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

(ಆ) ಹಾಗಿದ್ದಲ್ಲಿ, ಸದರಿ ಸಮಿತಿಗೆ ಖಾಸಗಿಯ ಎರಡು ಸದಸ್ಯರನ್ನು ನೇಮಿಸುವುದು ಸಾಧ್ಯವೆ?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

(ಅ) ರೈತರ ಜಮೀನಿಗೆ ಮಾತ್ರವೇ ಬೆಲೆ ನಿಗಧಿಪಡಿಸಲು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿರುವುದಿಲ್ಲ. ರಾಜ್ಯದಲ್ಲಿರುವ ಎಲ್ಲಾ ಸ್ಥಿರಾಸ್ತಿಗಳ ಸರಿಯಾದ ಬೆಲೆಯನ್ನು ನಿಗಧಿಪಡಿಸಲು ಆಸ್ತಿಯ ನಿಜವಾದ ಮಾರುಕಟ್ಟೆ ಅಂದಾಜು ಬೆಲೆಯನ್ನು ಉಪ-ನೋಂದಣಿ ಕಛೇರಿಗಳಿಗೆ ಸಂಬಂಧಪಟ್ಟಂತೆ, ಆ ಪ್ರದೇಶಗಳಿಗೆ ಸಂಬಂಧಿಸಿದಂತೆ ನೋಂದಾಯಿಸಿರುವ ದಸ್ತಾವೇಜುಗಳ ಆಧಾರದ ಮೇಲೆ ಸ್ಥಿರಾಸ್ತಿಗಳ ಬೆಲೆ ನಿಗಧಿಪಡಿಸಲು ಸಮಿತಿಗಳನ್ನು ರಚಿಸಲಾಗಿದೆ.

ಲಭ್ಯವಿರುವ ಅಂಕಿ-ಅಂಶಗಳ ಆಧಾರದ ಮೇಲೆ ಆಸ್ತಿಗಳ ಮೌಲ್ಯ ನಿರ್ಧರಿಸುವುದರಿಂದ ಯಾವುದೇ ರೀತಿಯ ತಾರತಮ್ಯ ಉಂಟಾಗುವ ಸಂಭವವಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

ತಾಲ್ಲೂಕು ಮಟ್ಟದ ಅಕ್ರಮ-ಸಕ್ರಮ ಸಮಿತಿಗಳು.

13 - ಶ್ರೀ ಎಸ್. ಚಿಕ್ಕಮಾಧು (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರು ಈಗಾಗಲೇ ರಚಿಸಿರುವ ತಾಲ್ಲೂಕು ಮಟ್ಟದ "ಅಕ್ರಮ ಸಕ್ರಮ" ಸಮಿತಿಗಳ ಮೂಲಕ ರಾಜ್ಯದಲ್ಲಿ ಇದುವರೆಗೆ ಗುರುತಿಸಿರುವ ಒಟ್ಟು ಜಮೀನಿನ ಪ್ರಮಾಣವೆಷ್ಟು?

ಆ) ಆದರಲ್ಲಿ ಈಗಾಗಲೇ ಸಕ್ರಮಗೊಂಡಿರುವ ಭೂಮಿಯ ಪ್ರಮಾಣವೆಷ್ಟು ಮತ್ತು ಆ ರೀತಿ ಸಕ್ರಮಗೊಂಡ ಜಮೀನುಗಳಿಂದ "ಕಿಮ್ಮತ್ತು" ರೂಪದಲ್ಲಿ ಸರ್ಕಾರಕ್ಕೆ ಈಗಾಗಲೇ ಸಂದಾಯವಾಗಿರುವ ಮೊಬಲಗೆಷ್ಟು?

ಇ) ಈ ಬಗ್ಗೆ ಸರ್ಕಾರದ ಹಾಲಿ ನಿಯಮದಂತೆ ಈಗಾಗಲೇ ಸಕ್ರಮಗೊಂಡಿರುವ ಪ್ರತಿ ಒಂದು ಎಕರೆ ಜಮೀನಿಗೆ ಐದು ರೂ. ಕಂದಾಯದಂತೆ ಆದರ ಎರಡು ನೂರು ಪಟ್ಟು ಕಿಮ್ಮತ್ತು ಅಂದರೆ ಎಕರೆ ಒಂದಕ್ಕೆ ಅಂದಾಜು ಒಂದು ಸಾವಿರ ರೂ.ಗಳಿಗೂ ಮಿಗಿಲಾಗಿ ಈ ಕಿಮ್ಮತ್ತು ರೂಪದಲ್ಲಿ ವಸೂಲಿ ಮಾಡುತ್ತಿರುವುದು ದುರ್ಬಲ ವರ್ಗದ ವ್ಯವಸಾಯಗಾರರಿಗೆ ಸದರಿ ಹಣವನ್ನು ತುಂಬಲು ಆರ್ಥಿಕ ಶಕ್ತಿ ಇಲ್ಲದೆ ತೊಂದರೆಗೊಳಗಾಗಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು?

ಉ) ಇಲ್ಲದಿದ್ದಲ್ಲಿ ಇನ್ನು ಮುಂದೆಯಾದರೂ ಈ ದುರ್ಬಲವರ್ಗದ ರೈತರ ಹಿತದೃಷ್ಟಿಯಿಂದ ಈ ಬಗ್ಗೆ ಕೈಕೊಳ್ಳಬಹುದಾದ ತುರ್ತು ರೀತಿಯ ನೀತಿ ನಿಯಮಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

ಅ) 25,80,214 ಎಕರೆ ಜಮೀನನ್ನು ಸಕ್ರಮಗೊಳಿಸಲು ಅರ್ಜಿಗಳು ಬಂದಿರುತ್ತವೆ.

ಆ) 1,04,021 ಎಕರೆಗಳು ಸಕ್ರಮಗೊಳಿಸಿರುವ ವಿಸ್ತೀರ್ಣ. ರೂ. 82,82,932-00 ಸಂದಾಯವಾದ ಹಣ.

ಇ) ಕರ್ನಾಟಕ ಭೂ ಕಂದಾಯದ ಹಾಲಿ ನಿಯಮ 108 (ಜಿ)ಯಗಳ ಪ್ರಕಾರ ಭೂಮಿಯ ಬೆಲೆಯನ್ನು ಭೂ ಕಂದಾಯದ ಎರಡು ನೂರುಪಟ್ಟು ವಸೂಲು ಮಾಡಲಾಗುತ್ತಿದೆ.

ಈ) ಈ ಬಗ್ಗೆ ಹಲವಾರು ಶಾಸಕರುಗಳಿಂದ ವ್ಯಕ್ತವಾಗಿರುವ ಅಭಿಪ್ರಾಯದಂತೆ, ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಈಗ ಒದಗಿಸಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ರಚನೆ.

647 - ಶ್ರೀ ಬಸವರಾಜ ಪಾಟೀಲ್ ಆಟ್ಟೂರ್, (ಬಸವ ಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದ ಜನಸಂಖ್ಯೆ ಎಷ್ಟು?

ಆ) ಪ್ರಸಿದ್ಧ ಪ್ರವಾಸಿ ಹಾಗೂ ಯಾತ್ರಾಸ್ಥಳವಾದ ಬಸವ ಕಲ್ಯಾಣ ಪಟ್ಟಣವು ದಿನೇ ದಿನೇ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ, ಯಾವಾಗ ಆ ಪ್ರಾಧಿಕಾರವನ್ನು ರಚಿಸಲಾಗುವುದು?

ಶ್ರೀ ಬೌಡರೆಡ್ಡಿ (ನಗರಾಭಿವೃದ್ಧಿ ಸಚಿವರು.)

ಅ) 42,712 (1991 ಜನಗಣತಿ ಪ್ರಕಾರ.)

ಆ) ಹೌದು.

ಇ) ಈ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಹೊಸಕೆರೆ ಸರ್ವೆ ನಂ. 88ರ ಬಗ್ಗೆ.

54 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಗೋಣಿಬೀಡು ಹೋಬಳಿ ಹೊಸಕೆರೆ ಗ್ರಾಮದ ಸರ್ವೆ ನಂ.88 ರ ಸರ್ಕಾರಿ ಕಾಡಿನಲ್ಲಿ 50 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯವರು ಅಕ್ರಮವಾಗಿ ಪರಬಾರೆ ಮಾಡಿರುವುದರಿಂದ ಸರ್ಕಾರಕ್ಕೆ 30 ಲಕ್ಷ ರೂಪಾಯಿ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಆ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು.) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.